# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು-572 103, ☏:0816-2254546 ಫ್ಯಾಕ್ಸ್:0816-2270719

ಸಂಖ್ಯೆ: ತುವಿ: 14ನೇ ಘಟಿಕೋತ್ಸವ : 2020-21: 439 ದಿನಾಂಕ: 05.12.2020

## ಅಧಿಸೂಚನೆ

ವಿಷಯ: 2021 ರ ಫೆಬ್ರವರಿ ಮಾಹೆಯಲ್ಲಿ ನಡೆಯಲಿರುವ ತುಮಕೂರು ವಿಶ್ವವಿದ್ಯಾನಿಲಯದ 14 ನೇ ವಾರ್ಷಿಕ ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 02.12.2020

*******

2021 ರ ಫೆಬ್ರವರಿ ಮಾಹೆಯಲ್ಲಿ ನಡೆಯಲಿರುವ ತುಮಕೂರು ವಿಶ್ವವಿದ್ಯಾನಿಲಯದ 14ನೇ ವಾರ್ಷಿಕ ಘಟಿಕೋತ್ಸವಕ್ಕೆ ಪ್ರವೇಶ ಪಡೆಯುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸಂಬಂಧಪಟ್ಟ ಅಭ್ಯರ್ಥಿಗಳು ಆಯಾ ಕಾಲೇಜಿನ ಇ.ಎಂ.ಎಸ್. ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

<u>ಪದವಿ ಪ್ರಮಾಣ ಪತ್ರಗಳಿಗೆ ನಿಗದಿಪಡಿಸಿದ ಶುಲ್ಕದ ವಿವರ ಹೀಗಿದೆ:</u>

1. ಆನ್‌ಲೈನ್ ಅರ್ಜಿ ಶುಲ್ಕ : ರೂ. 50-00
2. ಭಾರತೀಯ ವಿದ್ಯಾರ್ಥಿಗಳು : ರೂ. 500-00
3. ವಿದೇಶಿ ವಿದ್ಯಾರ್ಥಿಗಳು : ರೂ. 2000-00
4. ಹಳೆ ವಿದ್ಯಾರ್ಥಿಗಳು : ಪ್ರತೀ ವರ್ಷಕ್ಕೆ ಹೆಚ್ಚುವರಿ : ರೂ. 200-00

ತುಮಕೂರು ವಿಶ್ವವಿದ್ಯಾನಿಲಯದ ಬಿ.ಎ./ಬಿ.ಎ. (ವಾರ್ಷಿಕ)/ಬಿ.ಎ. (ಇಂಟಗ್ರೇಟೆಡ್ ಕನ್ನಡ ಪಂಡಿತ್)/ ಬಿ.ಎಫ್.ಎ./ ಬಿ.ಎಸ್.ಡಬ್ಲ್ಯೂ./ ಬಿ.ಎಸ್ಸಿ./ ಬಿ.ವೋಕ್./ ಬಿ.ಸಿ.ಎ./ ಬಿ.ಕಾಂ./ ಬಿ.ಕಾಂ. (ವಾರ್ಷಿಕ)/ ಬಿ.ಬಿ.ಎಂ./ 3 ಮತ್ತು 5 ವರ್ಷಗಳ ಎಲ್.ಎಲ್.ಬಿ./ಬಿ.ಪಿ.ಇಡಿ./ ಎಂ.ಎ. – ಕನ್ನಡ, ಇಂಗ್ಲಿಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಎಂಎಸ್‌ಡಬ್ಲ್ಯೂ, ಎಂ.ಎಸ್ಸಿ– ಗಣಿತಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಪರಿಸರ ವಿಜ್ಞಾನ, ವಿದ್ಯುನ್ಮಾನ ಮಾಧ್ಯಮ, ಮನಃಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಎಂ.ಎಸ್. ಸಂವಹನ, ಎಂ.ಕಾಂ. ಮತ್ತು ಎಂ.ಬಿ.ಎ. ಪರೀಕ್ಷೆಗಳನ್ನು ತೇರ್ಗಡೆ ಹೊಂದಿ **2019** ರ **ಅಕ್ಟೋಬರ್/ನವಂಬರ್ ಹಾಗೂ 2020 ರ ಸೆಪ್ಟಂಬರ್/ಅಕ್ಟೋಬರ್** ಒಳಗೆ ಪದವಿಗಳನ್ನು ಪೂರೈಸಿದವರು ಮಾತ್ರ ಈ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಸ್ನಾತಕ ಶಿಕ್ಷಣ (ಬಿ.ಇಡಿ.) ಪದವಿಯಲ್ಲಿ **2019** ರ ಆಗಸ್ಟ್ ಮಾಹೆಯಿಂದ **2020** ರ ಸೆಪ್ಟಂಬರ್/ಅಕ್ಟೋಬರ್ ಮಾಹೆಯವರೆಗೆ ನಡೆದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಮಾತ್ರ ಪ್ರಸ್ತುತ ಘಟಿಕೋತ್ಸವದಲ್ಲಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

(...2)

ಹಿಂದಿನ ಘಟಿಕೋತ್ಸವದಲ್ಲಿ ಅರ್ಹರಿದ್ದು, ಪದವಿ ಪ್ರಮಾಣ ಪತ್ರಗಳನ್ನು ಪಡೆಯದೆ ಇರುವ ವಿದ್ಯಾರ್ಥಿಗಳು ಪ್ರಸ್ತುತ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸಲು ನೀಡಿರುವ ಕೊನೆಯ ದಿನಾಂಕದ ನಂತರ ಆಯಾ ಕಾಲೇಜಿನ ಇ.ಎಂ.ಎಸ್. ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಲಾಗುವುದು.

ಆನ್‌ಲೈನ್‌ನಲ್ಲಿ ಘಟಿಕೋತ್ಸವ ಅರ್ಜಿಗಳನ್ನು ತುಂಬುವಾಗ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಹಾಗೂ ಶೈಕ್ಷಣಿಕ ವಿವರಗಳು ಸರಿಯಾಗಿ ಇವೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ತಿದ್ದುಪಡಿಗಳಿದ್ದಲ್ಲಿ (ಹೆಸರು, ವರ್ಗ, ಇತ್ಯಾದಿ) ಅವುಗಳನ್ನು ಪ್ರತ್ಯೇಕ ಅರ್ಜಿಯನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಆಯಾ ಕಾಲೇಜಿನ ಪ್ರಾಂಶುಪಾಲರ ಮೂಲಕ ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಸರಿಪಡಿಸಿಕೊಳ್ಳತಕ್ಕದ್ದು.

ಒಂದೊಮ್ಮೆ ಅಭ್ಯರ್ಥಿಯು "ವಿಶಿಷ್ಟ ಚೇತನ" ರಾಗಿದ್ದರೆ, ಸಂಬಂಧಪಟ್ಟ ಅರ್ಜಿಯಲ್ಲಿ "ಹೌದು" ಎಂದು ನಮೂದಿಸಿ, ಸೂಕ್ತ ದಾಖಲೆಗಳನ್ನು (ಸರ್ಕಾರಿ ಜಿಲ್ಲಾ ಆಸ್ಪತ್ರೆ ಶಸ್ತ್ರಚಿಕಿತ್ಸಕ ಅಧಿಕಾರಿಗಳಿಂದ ನೀಡಲ್ಪಟ್ಟ ಪ್ರಮಾಣಪತ್ರ) ಅಪ್‌ಲೋಡ್ ಮಾಡಬೇಕು ಹಾಗೂ ಸದರಿ ದಾಖಲೆಯ ದೃಢೀಕೃತ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

ಅಭ್ಯರ್ಥಿಗಳ ಫಲಿತಾಂಶಗಳನ್ನು ತಡೆಹಿಡಿಯಲಾಗಿದ್ದರೆ, ಅಂತಹ ಅಭ್ಯರ್ಥಿಗಳು ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸುವ ಮುನ್ನ ಸೂಕ್ತ ತಿದ್ದುಪಡಿ ಮಾಡಿಸಿಕೊಂಡು, ಫಲಿತಾಂಶ ಬಿಡುಗಡೆಯಾದ ನಂತರ ವಿಶ್ವವಿದ್ಯಾನಿಲಯದಿಂದ ವಿತರಿಸಲ್ಪಟ್ಟ ಅಂಕಪಟ್ಟಿಗಳೊಂದಿಗೆ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

ಅಭ್ಯರ್ಥಿಗಳಿಗೆ ಪದವಿ ತರಗತಿಗಳಲ್ಲಿ ಸುವರ್ಣಲೇಪಿತ ಬೆಳ್ಳಿ ಪದಕ/ನಗದು ಬಹುಮಾನಗಳನ್ನು ಘೋಷಿಸಲಾಗಿದ್ದರೆ, ಅಂತಹ ಅಭ್ಯರ್ಥಿಗಳು 14 ನೇ ವಾರ್ಷಿಕ ಘಟಿಕೋತ್ಸವಕ್ಕೆ **'ಖುದ್ದು ಹಾಜರಾಗುವ'** ಅರ್ಜಿಗಳನ್ನು ಸಲ್ಲಿಸಬೇಕು. ಇಲ್ಲವಾದರೆ ಅಂತಹ ಅಭ್ಯರ್ಥಿಗಳು ಘಟಿಕೋತ್ಸವದಲ್ಲಿ ಅವುಗಳನ್ನು ಸ್ವೀಕರಿಸಲು ಅನರ್ಹರಾಗುತ್ತಾರೆ. ಮುಂದೆ ಅವರು ಅವುಗಳನ್ನು ಪಡೆಯಬಯಸಿದರೆ ಕುಲಸಚಿವರು (ಪರೀಕ್ಷಾಂಗ) ಕಚೇರಿಯಿಂದ ಪಡೆದುಕೊಳ್ಳಬೇಕಾಗುತ್ತದೆ.

ಆನ್‌ಲೈನ್‌ನಲ್ಲಿ ಭರ್ತಿ ಮಾಡಿ, ಮುದ್ರಿತ ಅರ್ಜಿಗಳನ್ನು ಸಹಿ ಮಾಡಿ, ದೃಢೀಕೃತ ಅಂಕಪಟ್ಟಿ ಇತ್ಯಾದಿಗಳೊಂದಿಗೆ ತಮ್ಮ ಕಾಲೇಜುಗಳ ಪ್ರಾಂಶುಪಾಲರಿಗೆ/ ವಿಭಾಗದ ಮುಖ್ಯಸ್ಥರಿಗೆ ಈ ಕೆಳಕಂಡ ದಿನಾಂಕದಂದು ಅಥವಾ ಅದರೊಳಗೆ ಸಲ್ಲಿಸತಕ್ಕದ್ದು:

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 25.12.2020**

**ರೂ. 200-00 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2020**

ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ತಮ್ಮ ಕಾಲೇಜುಗಳಲ್ಲಿ ಸಲ್ಲಿಸಬೇಕು.

ನಿಗದಿತ ದಿನಾಂಕದೊಳಗೆ ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸಬೇಕು.

- ಕಾಲೇಜಿನವರು ಇ.ಎಂ.ಎಸ್. ತಂತ್ರಾಂಶದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಗಳ ಅರ್ಜಿಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಭಾವಚಿತ್ರಗಳು ಆಯಾ ವಿದ್ಯಾರ್ಥಿಗಳದ್ದೆ ಎಂಬುದನ್ನು ದೃಢಪಡಿಸಿಕೊಂಡು ತಂತ್ರಾಂಶಕ್ಕೆ ಅಳವಡಿಸಿಕೊಳ್ಳಬೇಕು. ಭಾವಚಿತ್ರಗಳು ಅದಲು-ಬದಲು ಅಥವಾ ತಪ್ಪಾಗಿದ್ದಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರು ಜವಾಬ್ದಾರರಾಗಿರುತ್ತಾರೆ.
- ಅಭ್ಯರ್ಥಿಗಳು ಅರ್ಜಿಗಳನ್ನು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬಾರದು.

ಪ್ರಾಂಶುಪಾಲರು/ ನಿರ್ದೇಶಕರು/ ವಿಭಾಗ ಮುಖ್ಯಸ್ಥರು ತಮ್ಮಲ್ಲಿರುವ ದಾಖಲೆಗಳ ಆಧಾರದಲ್ಲಿ ಅರ್ಜಿಗಳನ್ನು ಪರಿಶೀಲಿಸಿ, ಸಂಬಂದಪಟ್ಟ ದಾಖಲೆಗಳೊಂದಿಗೆ, ತಂತ್ರಾಂಶದಿಂದ ಡೌನ್‌ಲೋಡ್ ಮಾಡಿಕೊಂಡ ಅರ್ಜಿ ಸಲ್ಲಿಸಲ್ಪಟ್ಟ ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ವಿಶ್ವವಿದ್ಯಾನಿಲಯಕ್ಕೆ **ದಿನಾಂಕ: 02.01.2021 ರೊಳಗೆ** ಸಲ್ಲಿಸುವುದು. ಹಾಗೂ **ಸಂಗ್ರಹವಾದ ಶುಲ್ಕವನ್ನು ಪ್ರಾಂಶುಪಾಲರು/ ನಿರ್ದೇಶಕರು/ ವಿಭಾಗಗಳ ಮುಖ್ಯಸ್ಥರು ಆರ್‌ಟಿಜಿಎಸ್/ ನೆಫ್ಟ್ ಮೂಲಕ ಎಸ್‌ಬಿಐ ಖಾತೆ ಸಂಖ್ಯೆ 36954908103 ಗೆ ಜಮಾ ಮಾಡಬೇಕು.**

ಈ ಮಾಹಿತಿಯನ್ನು ಪ್ರಾಂಶುಪಾಲರು/ ನಿರ್ದೇಶಕರು/ ವಿಭಾಗಗಳ ಮುಖ್ಯಸ್ಥರು ಆರ್‌ಟಿಜಿಎಸ್/ನೆಫ್ಟ್ ಪ್ರತಿಯೊಂದಿಗೆ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳಿಗೆ ಸಲ್ಲಿಸಬೇಕು.

ಕೊನೆಯ ದಿನಾಂಕದ ಬಳಿಕ ಬರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.

ಘಟಿಕೋತ್ಸವದ ನಿರ್ದಿಷ್ಟ ಸಮಯ, ದಿನಾಂಕ, ಸ್ಥಳ, ಮುಖ್ಯ ಅತಿಥಿಗಳ ಹೆಸರು ಇತ್ಯಾದಿ ವಿವರಗಳನ್ನು ಮುಂದೆ ತಿಳಿಸಲಾಗುವುದು.

ಆದೇಶದ ಮೇರೆಗೆ

5/12/2020

ಕುಲಸಚಿವ (ಪರೀಕ್ಷಾಂಗ)

ಗೆ,

ಎಲ್ಲಾ ಮುಖ್ಯಸ್ಥರು/ ಸಂಯೋಜಕರು/ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರು (ಮೌಲ್ಯಮಾಪನ)
5. ಕಚೇರಿ ಪ್ರತಿ